ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಪದೇ ಪದೇ ಈ ಮನೆಯಲ್ಲಿ ಹೇಳುತ್ತಲೇ ಇದ್ದೇನೆ. ಮುಂದೆ ಕೊಡತಕ್ಕ ಕಂತುಗಳ ಬಗ್ಗೆ ತಿದ್ದುಪಡಿ ಕಾನೂನು ಪಾಸ್ ಮಾಡಿದ್ದೇವೆ. ಅದನ್ನು ಪಸೂಲು ಮಾಡುವುದಿಲ್ಲ. ಹಿಂದೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ತೆಗೆದು ಕೊಂಡಿದ್ದು ಕೊಡಬೇಕಾಗುತ್ತದೆ. ಅದರ ಬಗ್ಗೆ ಸ್ಪಷ್ಟವಾದ ನಿಲುವು ಹೇಳಿದ್ದೇನೆ. ಈಗ ನನ್ನಲ್ಲಿ ಅಂಕಿಅಂಶಗಳು ಇಲ್ಲ, ಅದನ್ನು ನಾನು ಕೊಡುತ್ತೇನೆ. ಹಿಂದೆ ಬಿಲ್ ಬಗ್ಗೆ ಚರ್ಚೆ ಮಾಡಿದಾಗ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ತಮಗೆ ಬೇಕಾದರೆ ಇನ್ನೊಂದು ಸಾರಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದಿರಿ ಹೊರತು ಸ್ಪಷ್ಟವಾಗಿ ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡವರಿಗೆ ಸಿಕ್ಕುವುದಿಲ್ಲ ಎಂದು ಹೇಳಲಿಲ್ಲ. ತಾವು ಪುನರ್‌ಪರಿಶೀಲನೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ.

ಶ್ರೀ ಬಿ. ಸತ್ಯನಾರಾಯಣ.—ಅಧ್ಯಕ್ಷರೇ, ಈ ಹಿಂದಿನ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಸಹಕಾರ ಮಂತ್ರಿಗಳನ್ನು ಕೇಳಿದಾಗ, ಕಂದಾಯ ಮಂತ್ರಿಗಳನ್ನು ಕೇಳಿ ಎಂದು ಹೇಳಿದರು. ಕಂದಾಯ ಮಂತ್ರಿಗಳನ್ನು ಕೇಳಿದಾಗ ಮುಖ್ಯಮಂತ್ರಿಗಳನ್ನು ಕೇಳಿ ಎಂದು ಹೇಳಿದರು. ಅದೇ ಕಾರಣದಿಂದ ಸಹಕಾರ ಮಂತ್ರಿಗಳು, ಕಂದಾಯ ಮಂತ್ರಿಗಳು, ಮುಖ್ಯಮಂತ್ರಿಗಳು ಎಂದು ಪ್ರಸ್ತಾಪ ಮಾಡಿ ಬರೆದಿದ್ದೇನೆ. ಆದ್ದರಿಂದ ಇದು ಬಹಳ ದೊಡ್ಡ ವಿಷಯ. ಇದರ ಬಗ್ಗೆ ಹೇಳಬೇಕೆಂದರೆ ಬಡವರು ಸಾಯುತ್ತಿದ್ದಾರೆ. ಅವರ ಜಮೀನು ಹರಾಜಿಗೆ ಬಂದಿದೆ. ಈ ಒಂದು ವಿಷಯ ಬಹಳ ಮುಖ್ಯವಾದ ವಿಷಯ ಎಂದು ಹೇಳಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯದ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ಅಧ್ಯಕ್ಷರು.—ಈಗ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಯವರು ವಿಧಾನ ಪರಿಷತ್ತಿನಲ್ಲಿದ್ದಾರೆ ಅವರು ಬಂದ ಮೇಲೆ ವೇದಾಂತ ಹೆಮ್ಮಿಗೆ ಅವರದು ಬಿ.ಎಸ್. ಯಡಿಯೂರಪ್ಪನವರದು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇವೊತ್ತೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಅವರು ಯಾವಾಗ ಬರುತ್ತಾರೆ ಆಗ ತೆಗೆದುಕೊಳ್ಳೋಣ, ಇವೊತ್ತೇ ತೆಗೆದು ಕೊಳ್ಳೋಣ. ಈಗ ಪ್ರಕಟಣೆ.

ಪ್ರಕಟಣೆ

ಅಧ್ಯಕ್ಷರು.—ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧ಳಿನೇ ನಿಯಮದ ಮೇರೆಗೆ, ದಿನಾಂಕ ೨೨ನೇ ಫೆಬ್ರುವರಿ ೧೯೮೭ರಂದು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕಾರ ಪಡೆದ ಈ ಕೆಳಗೆ ನಮೂದಿಸಿರುವ ವಿಧೇಯಕಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

೧) ೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ.

೨) ೧೯೮೭ನೇ ಇಸವಿಯ ಕರ್ನಾಟಕ ಇನಾಂ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕ."